Regd No M 1299 34 th Year ತಾ|| 27—3—51

SATYAVADI

ಸತ್ಯವಾದಿ

ಸಂಪಾದಕರು- ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ಬಾಯರು [ಬಿಡಿ ಪ್ರತಿ 3 ಪೈ

ಬೊಂಬಾಯಿನಲ್ಲಿ ಕುಡಿತ ನಿಶೇದ ಹೋಗಲು ಕಾಂಗ್ರೆಸಿಗ್ರ ಒತ್ತಾಯ!

ಲಂಚ್ ಚರ್ಚೆಲಿ ಪೌರಸಭೆ ಅಧಕರು ಓಟ್ ಮಾಡಿದರು !

ಶ ಷ್ಟ

ಆರ್ಥಿಕ ಸ್ಥಿತಿ ಸುಧಾರಿಸಿದೆ

ಮೈಸೂರು ಪೌಸಭೆ ವಿಶೇಷಾಧಿವೇಶನ ನಿನ್ನೆ ಮಧ್ಯಾಹ್ನ 2 ಗಂಟೆಗೆ ಸೇರಿ ಮುಂಗಡ ಪತ್ರದ ಪರಿಶೀಲನೆ ನಡೆಸಿತು. ಅಧ್ಯಕ್ಷರು ಅಂದಾಜಪಟ್ಟಿಯನ್ನು ಪುಂಡಿಸುತ್ತಾ ಈ ಬಾರಿ ಆರ್ಥಿಕ ಪರಿಸ್ಥಿತಿ ಉತ್ಕೃಮಗೊಂಡಿದೆ – ಎಂದರು. ಅನೇಕ ಮಂದಿ ಮಾನ್ಯ ಸದಸ್ಯರು ಆರ್ಥಿಕ ಸ್ಥಿತಿ ಉತ್ಕೃಮಗೊಂಡಿದೆಯೆಂದರು.

ಪ್ರಜಾಸಂಘ ಅಂದಾಜ ಪಟ್ಟಿಯನ್ನು ಸುಸ್ವಾಗತಿಸಿತು.

ಅಂದಾಜಪಟ್ಟಿ ಮೇಲೆ ಮಾತನಾಡುತ್ತಾ, ಜನಾಬ್ ಅಹ್ಮದ್ ಖಾನ್ ಸಾಹೇಬರು, ಮಾರಾಟಕರ ಇಲ್ಲವೆ ತೆರಿಗೆ ರದ್ದಾಗಬೇಕೆಂದರು. ಪ್ರತಿ ವೊಹಲ್ಲಗಳಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರಿಗೆ ಜಸತಿ ನಿರ್ಮಿಸಿಕೊಡಬೇಕೆಂದರು.

ಶ್ರೀ ಎ. ವೆಂಕಟೇಶಯ್ಯನವರು ಮಾತನಾಡುತ್ತಾ, ದಫೇದಾರ್ ಮುಂತಾದವರಿಗೆ ವಸತಿಗಳನ್ನು ನಿರ್ಮಿಸಿ ಕೊಡುವ ಯೋಜನೆ ಮಾಡಬೇಕಿತ್ತೆಂದರು.

ಲಂಚ್ ವೆಚ್ಚ

ಮುಂದಿನ ಸಾಲಿಗೆ ಲಂಚ್ ಬಾಬ್ತು 2 ಸಹಸ್ರ ರೂ. ಅಂದಾಜ ಪರಿಶೀಲನೆಗೆ ಬರಲು ಪ್ರಜಾಸಂಘದ ಧುರೀಣ ಶ್ರೀ ಎ. ವೆಂಕಟೇಶಯ್ಯನವರು ಆ ವೆಚ್ಚ ಕೂಡದೆಂದು ಸೂಚಿಸಿದರು. ಶ್ರೀ ಬಿ. ಎಸ್. ರಾವ ಕೃಷ್ಣಯ್ಯನವರು ಸೂಚನೆಯನ್ನು ಬೆಂಬಲಿಸಿದರು.

ಶ್ರೀ ಎಸ್. ಲಿಂಗಣ್ಣನವರು ಸೂಚನೆಯನ್ನು ವಿರೋಧ ಮಾಡುತ್ತಾ : ಅಂದಾಜು 2 ಸಹಸ್ರ ರೂ. ಇದೆ. ಆದರೆ ಆ ಹಣ ವೆಚ್ಚವಾಗುವದಿಲ್ಲ. ಗಂಟೆಗಟ್ಟಿಲೆ ಚಾವಲ್ಲಿಸಬೇಕಾಗುತ್ತದೆ. ಆದ್ದರಿಂದ

ಮೈಸೂರು ಪೌರಸಭೆ

ಆದಾಯ

ರೂ 2884000

ವೆಚ್ಚ

ರೂ 2859000

ಸ್ವಲ್ಪ ತಿಂಡಿ ಸ್ವೀಕರಿಸಿದರೆ ನಷ್ಟವಿಲ್ಲ. ನ್ಯಾಯವಾಗಿಗೂ ಖರ್ಚನ್ನ ನಿಲ್ಲಿಸೊದಕ್ಕೆ ನಾನು ಒಪ್ಪುವಲ್ಲ. ಆದರೆ ವೆಚ್ಚವನ್ನು ಮಿತ ಮಾಡೋದಕ್ಕೆ ನಾನು ಒಪ್ಪಿನಿ – ಎಂದರು.

ಶ್ರೀ ಟಿ. ಚೌಡಯ್ಯನವರು ಸೂಚನೆ ವಿರೋಧಿಸಿ ಕೇವಲ ಅಂತಾಣೆ ತಿಂಡಿಕಟ್ಟಿಗಾಗಿ ನಾವಿಲ್ಲಿಗೆ ಬರ್ತಿಲ್ಲ – ಎಂದರು.

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಸೂಚನೆಯನ್ನು ವಿರೋಧಿಸುತ್ತಾ : ನಮಗೆಷ್ಟೆಷ್ಟೇ ಅಭಿಪ್ರಾಯಭೇದವಿದ್ದರೂ, ಒಂದೆಡೆ ಸೇರಿ ಸೋಷಿಯಲ್ ಅಟ್ಮಾಸ್ಫಿಯರ್‌ನಲ್ಲಿರೋ ಉದ್ದೇಶ ಸಹ ಲಂಚ್ ಏರ್ಪಾಟಿನಲ್ಲಿ ಸೇರಿದೆ – ಎಂದರು.

ಸೂಚನೆಯನ್ನು ಮತಕ್ಕೆ ಇಡಲು 8 ಪರವಾಗಿಯೂ (ಪ್ರಜಾಸಂಘ) 10 ವಿರೋಧವಾಗಿಯೂ (ಕಾಂಗ್ರೆಸ್ ಮತ್ತು ನಿಯಮಿತ ಸಭ್ಯರು) ಎಣಿಕೆ ಬಂದವು.

ಲಂಚ್‌ಗೆ ತಗಲುವ ಖರ್ಚು ನ್ಯಾಯಬದ್ಧವೆಂದು ನಾನು ಸೂಚನೆ ವಿರೋಧಿಸಿ ಮತಕೊಡುವೆ – ಎಂದು ಅಧ್ಯಕ್ಷರು ತಿಳಿಸಿದರು.

ಪೌರಸಭಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯ ಸಭೆ ಸಮಾವೇಶವಾಯಿತು.

ದೇಶ ರಕ್ಷಣೆಗೆ ದುಡ್ಡು

ದೇಶ ರಕ್ಷಣೆಗಾಗಿ ವೆಚ್ಚ ಮಾಡಲು ಭಾರತ ಪಾರ್ಲಿಮೆಂಟನ್ನು ಸರ್ಕಾರ ರೂ 1865472000 ಮಂಜೂರು ಮಾಡ ಬೇಕೆಂದು ನಿನ್ನೆ ಕೇಳಿದೆ

ಕನ್ನಡ ಬಳಕೆಗೆ ಬರಲಿ

ಕನ್ನಡದಲ್ಲೇ ಸರ್ವ ಕೆಲಸಕಾರ್ಯಗಳು ನಡೆಯಲಿ, ಏಪ್ರಿಲ್ ತಿಂಗಳಿಂದಲೇ ಈ ರೀತಿ ಜಾರಿಗೆ ಬರಲಿ . ಹೀಗೆಂದು ಶ್ರೀ ಚಾಮುಂಡಯ್ಯನವರು ನಿನ್ನೆ ಮೈಸೂರು ಪೌರಸಭೆಯಲ್ಲಿ ತಿಳಿಸಿದ್ದಾರೆ.

ಧಕಾಯಿತಿ ಜರುಗಿತು

ಆರು ಮೂದಿ ಆಯುಧಪಾಣಿ ಖಾಖಿ ಧಾರಿಗಳು ಮಾರ್ಕಾಪುರ ತಾಲ್ಲೋಕು ಯುರ್ಕಪಾಳ್ಯಂ ಗ್ರಾಮದಲ್ಲಿನ ವಜ್ರ ವ್ಯಾಪಾರಿಯ ಮನೆಗೆ ನುಗ್ಗಿ ಲೂಟಿ ಮಾಡಿದರು.

ರಾಜುರವರ ಅಪೀಲು

ಅಡಿಷನಲ್ ಸೆಷನ್ಸ್ ನ್ಯಾಯಾಧೀಶರ ಸನ್ಮುಖದಲ್ಲಿ ಶ್ರೀ ಎಲ್. ಎಸ್. ರಾಜುರವರ ಅಪೀಲು ಅರ್ಜಿಯ ವಾದ ವಿವಾದ ನಿನ್ನೆ ಜರುಗಿತೆಂದು ಬೆಂಗಳೂರು ವಾರ್ತೆ.

ಸಹಸ್ರಗಟ್ಲೆ ಟ್ಯಾಕ್ಸಿ

ಬೊಂಬಾಯಿಗೆ ಬಂದ ಜಲವಲ್ಲಭ ಎಂಬ ನಾಳೆ 3728 ಟ್ಯಾಕ್ಸಿಯನ್ನು ಕಂದಿದೆ

ಮಹಿಳೆಯರಿಗೆ ಕರೆ

ಅಖಿಲ ಭಾರತ ಮಹಿಳಾ ಪರಿಷತ್‌ನ ಕಾರ್ಯದರ್ಶಿ ಶ್ರೀಮತಿ ಕಾಮೇಶ್ವರಮ್ಮನವರು ಪುಣೆಯಲ್ಲಿ ಭಾರತ ಮಹಿಳೆಯರನ್ನುದ್ದೇಶಿಸಿ ಹೇಳಿಕೆಯಿತ್ತು, ಬರಲಿರುವ ಮಹಾ ಚುನಾವಣೆಯಲ್ಲಿ ಮಹಿಳಾ ಉಮೇದುವಾರರು ಅದಷ್ಟು ಸ್ಪರ್ಧಿಸಬೇಕೆಂದು ತಿಳಿಸಿದರು

ಸುಪ್ರೀಂ ಕೋರ್ಟಿನ ಸೂಚನೆ

ನಿನ್ನೆ ದಿವಸ ಭಾರತದ ಸುಪ್ರೀಂ ಕೋರ್ಟು ಸೂಚನೆಯನ್ನಿತ್ತು ರಾಜ್ಯಾಂಗ ಶಾಸನದ 29 [2] ನೆ ವಿಧಿ ಪ್ರಕಾರ ಕಾಲೇಜುಗಳಲ್ಲಿ ಜಾತಿರೀತ್ಯ ಪ್ರವೇಶ ಕೊಡುವದು ವಿರೋಧವಾದದು ಇದರ ಮೇಲೆ ವಾದವೇ ಬೇಡ – ಎಂದು ತಿಳಿಸಿರುವದಾಗಿ ದೆಹಲಿ ವಾರ್ತೆ

ದಿವ್ಯವಾಣಿ

ಯಾವುದು ಪರಾಧೀನವಾಗುದೋ ಅದು ದುಃಖಪದ ಯಾವುದು ತನ್ನ ಅಧೀನದಲ್ಲಿದೆಯೋ ಅದೇ ಸುಖಪ್ರದ ಇದೇ ಸುಖದ ದುಃಖಗಳ ಸಂಕ್ಷಿಪ್ತ ಲಕ್ಷಣವೆಂದು ತಿಳಿಯಬೇಕು

ದಾಸಪ್ಪನವ್ರ ವೆಚ್ಚ

ಹಣಕಾಸಿನ ಮಂತ್ರಿ ಶ್ರೀ ದಾಸಪ್ಪನವರು ಪಾಶ್ಚಾತ್ಯ ದೇಶಗಳನ್ನು ಸುತ್ತಿ ಬಂದದ್ದಕ್ಕೆ ರೂ 12125–13–0 ಖರ್ಚಾಯಿತೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತೆಂದು ಬೆಂಗಳೂರು ವಾರ್ತೆ

ನಿಯಂತ್ರಣ ರದ್ದಾಗ್ಬೇಕು

ಆಹಾರ ನಿಯಂತ್ರಣ ಈಗ್ಲೆ ಹೋರ ಟ್ಹೋಗಲೆಂದು ಕಾಂಗ್ರೆಸ್ ಅಧ್ಯಕ್ಷ ಶ್ರಿ ಹನುಮಂತಯ್ಯನವರು ಎಲಹಂಕದಲ್ಲಿ ತಿಳಿಸಿದ್ದಾರೆ

ಶುಲ್ಕ ಹೆಚ್ಚಿಸಕೂಡದು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶುಲ್ಕ ಹೆಚ್ಚಿಸಕೂಡದೆಂದು ಬೆಂಗಳೂರಿನ ಭಾರತಿ ಯುವಕ ಕಾಂಗ್ರೆಸ್ ನಿರ್ಣಯ ಮಾಡಿದೆ

ಎಂ. ಪಿ. ಸಿ. ಸಿ.

ಏಪ್ರಿಲ್ 14–15 ರಲ್ಲಿ ವಾಣಿವಿಲಾಸಪುರದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿ ಕೂಡಲಿದೆ

ಕಾಂಗ್ರೆಸಿಗರ ಒತ್ತಾಯ

ಮೊನ್ನೆ ಬೊಂಬಾಯಿ ಸಚಿವರು ಮತ್ತು 4 ಪ್ರದೇಶ ಕಾಂಗ್ರೆಸ್ ಸಮಿತಿಯವರ ಪರಿಷತ್‌ನಲ್ಲಿ ಕಾಂಗ್ರೆಸ್ ಪಕ್ಷದ ಕೆಲವು ಸಭ್ಯರು ಭಾಗವಹಿಸಿ ಬೊಂಬಾಯಿ ನಗರದಲ್ಲಿ ಪಾನಪ್ರತಿಬಂಧ ರದ್ದು ಗೊಳಿಸಬೇಕೆಂದು ಒತ್ತಾಯಪಡಿಸಿದರೆಂದು ಗೊತ್ತಾಗಿದೆ ಖಜಾನೆ ತುಂಬಲು ಈ ಸಲಹೆಯೆಂದು ಗೊತ್ತಾಗಿದೆ

× ರಾಷ್ಟ್ರಪತಿ ಟ್ರೂಮನ್ ಅಂತರ ಅವೇವಿಕ ಸಂಘಟನೆಗೆ ಪಾರ್ಥಿಸಿರುತ್ತಾರೆ

× ದಕ್ಷಿಣ ಆಫ್ರಿಕೆ ಸಮಸ್ಯೆ ಬಗೆಗೆ ಭಾರತ ಮತ್ತು ಆ ಸರ್ಕಾರಗಳಲ್ಲಿ ಪತ್ರವ್ಯವಹಾರ ಜರುಗುತ್ತಿದೆ ಎಂದು ಡಾಕ್ಟರ್ ಸ್ಯಕ್ ತಿಳಿಸಿದ್ದಾರೆ

ಆಹಾರ ಸಮಸ್ಯೆಯ ನಿಜ ಸ್ವರೂಪ, (೧)

'ಆಹಾರ ಪದಾರ್ಥಗಳ ಅಭಾವ' ಎಂಬುದೊಂದು ಈ ಕಾಲದಲ್ಲಿ ಮಹಾ ಸಮಸ್ಯೆಯಾಗಿದೆ ಕೆಲವು ವರ್ಷಗಳಹಿಂದೆ 'ಹೆಚ್ಚು ಆಹಾರ ಬೆಳೆಯಿರಿ' ಎಂಬ ಕೂಗು ಹುಟ್ಟಿತು ಕ್ರಮೇಣ 'ರೇಷನ್ – ಕಂಟ್ರೋಲ್' ಗಳು ಪ್ರಾರಂಭವಾದುವು. ಆ ಕಾಲದಲ್ಲಿ ಅದು ಅಗತ್ಯವಿದ್ದಿರಬಹುದು. ಆದರೆ ಆಮೇಲೆ ಕೆಲವು ಕಾಲದ ಬಳಿಕ ಪೂಜ್ಯ ಮಹಾತ್ಮಾ ಗಾಂಧಿಯವರು 'ಕಂಟ್ರೋಲ್ ರೇಷನ್ ಎಲ್ಲವನ್ನೂ ತೆಗೆದುಹಾಕಿಬಿಡಿ, ಎಲ್ಲವೂ ಸರಿಹೋಗುತ್ತೆ' ಎಂದು ಸರಕಾರಕ್ಕೆ ಸೂಚನೆಕೊಟ್ಟರು ; ಸಾರಿದರು ; ಆಗ ಸರಕಾರದವರು ಅದಂತೆ ಮಾಡಿದರು. ಕೆಲವು ದಿನಗಳು ಹಾಗೂ ನಡೆಯಿತು : ಆ ಪ್ರಯೋಗವನ್ನು ಸರಿಯಾಗಿ ಪರೀಕ್ಷಿಸಿ ನೋಡಲು ಸರಕಾರದವರಿಗೆ ಅಷ್ಟು ತಾಳ್ಮೆ ಇಂಬಿಲ್ಲ ; ಏನು ಕಷ್ಟಗಳು ಬಂದವೊ ? ಮತ್ತೆ ಪುನಃ ಯಥಾಪ್ರಕಾರ ಕಂಟ್ರೋಲು ರೇಷನ್ನುಗಳು ಆವಿರ್ಭವವಾಯಿತು.

ಈಗಲೂ ಅದೇ ನಡೆಯುತ್ತಾಯಿದೆಯಾದರೂ ಈವರೆಗೆ ಪರಿಸ್ಥಿತಿಯಲ್ಲಿ ಏನಾದರೂ ಸುಧಾರಣೆಯಾಗಿಬಿಟ್ಟಿದೆ ಎಂದರೆ ಏನೂ ಇಲ್ಲ ; ಅದರ ಬದಲಿಗೆ ಪರಿಸ್ಥಿತಿಯು ಮತ್ತಷ್ಟು ಹದಕೆಟ್ಟಿದೆ, ಭಯಾನಕವಾಗಿದೆ ರೇಷನ್ ಪ್ರಮಾಣದಲ್ಲಿ ಖೋತಾವಾಡಿರುವುದಲ್ಲದೇ ಬೆಲೆಯನ್ನೂ ಹೆಚ್ಚಿಸಿದ್ದಾಯಿತು : ಆಹಾರ ಪದಾರ್ಥಗಳ ವಿಷಯದಲ್ಲಿ ಹೊಸಹೊಸದಾಗಿ ಅಜ್ಞಿ ಕಾನೂನುಗಳು ಬರಲಾರಂಭವಾದವು ; ಕೊಡುತ್ತಿರುವ ರೇಷನ್ ಪ್ರಮಾಣ ಬಹಳ ಕಡಮೆಯಾಗಿದ್ದರೂ ಜನಗಳು ವಾರಕ್ಕೊಂದು ದಿನ 'ಉಪವಾಸ' ವಿರಬೇಕೆಂಬ ಸಲಹೆಗಳು ಒಂದೆಡೆ 'ಜನಸಂಖ್ಯೆ ಬೆಳೆಯುತ್ತಾ ಇರುವುದರಿಂದ ಆಹಾರ ಪದಾರ್ಥಗಳು ಸಾಲದೇ ಹೋಗುತ್ತಿವೆ' ಎಂದು ಉದ್ಗಾರವೂ ಬಂತು. 'ಇನ್ನೆರಡು ವರ್ಷಗಳ ಕಾಲ ಜನಸಂಖ್ಯೆಯೇ ಆಗದಿದ್ದರೆ ಅಷ್ಟು ಆಹಾರ ಸಮಸ್ಯೆ ಪರಿಹಾರವಾಗುತ್ತೆ' ಎಂಬ ಭವಿಷ್ಯದ ಆಶಾವಾದವನ್ನು ಹೇಳಿ ಹಿಗ್ಗಿದುದೂ ಆಯಿತು. ಸಧ್ಯಃ 'ಯಾವುದಾದರೂ ಸಾಂಕ್ರಾಮಿಕ ರೋಗ ಬಂದು ಸಾಕಷ್ಟು ಜನಗಳು ನಶಿಸಿಹೋದರೆ ಕಷ್ಟವೆಲ್ಲಾ ನಿವಾರಣೆಯಾಗುತ್ತವೆ' ಎಂದು ಹೇಳಿಕೆಯು ಇನ್ನೂ ಆಗದೇ ಇರುವುದು ಪ್ರಜೆಗಳ ಮಹಾಭಾಗ್ಯವು ಸರಕಾರ ಮತ್ತು ಮುಖಂಡರ ಹೇಳಿಕೆಗಳಿಂದ ಮತ್ತು ಆಗಾಗ ಹುಟ್ಟುತ್ತಿರುವ ಕಾನೂನು ಮತ್ತು ಆಜ್ಞೆಗಳಿಂದ ಬಡಜನರ ಮನಸ್ಸು ಗಾಬರಿಗೊಂಡಿದೆ. ಹೊಸ ಹತೋಟಿ ಆಜ್ಞೆ ಹೊಸ ಹೇಳಿಕೆ ಹೊಂಟಂತೆಲ್ಲಾ ಕಳ್ಳದಾಸ್ತಾನು, ಕಳ್ಳಪೇಟೆ ನಾಡುವ ಲಾಭಬಡಕರಿಗೆಲ್ಲಾ ಉತ್ತೇಜನ ಸಿಕ್ಕಿದಂತಾಗುತ್ತಿದೆ

ಈ ಕಷ್ಟಗಳಿಗೆ ಕಾರಣವೇನು ? ಈ ಪರಿಸ್ಥಿತಿಯ ನಿಜಸ್ವರೂಪವೇನು ? ಇದರ ಪರಿಹಾರೋಪಾಯವೇನು ? ಎಂಬುದನ್ನು ಪ್ರತಿಯೊಬ್ಬ ಪ್ರಜೆಯೂ ಚೆನ್ನಾಗಿ ಯೋಚಿಸಿ ಮನನ ಮಾಡಬೇಕಾಗಿದೆ. [ಮುಂದುವರಿಯುವುದು

ಐ. ಟಿ. ಎಲ್. ಗ್ರೈಪ್ ಸಿರಪ್



ನಿಮ್ಮ ಪುಟ್ಟಿ ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ಉಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ವನಸುಂದರಿ ❁ Vanasundari

ಪಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿವೂಟಿ
ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು
ಅಮೋಘ ಶಮಿಳು ಚಿತ್ರ — ಪ್ರತಿದಿನ 3 ಆಟಗಳು ; ವ್ಯಾಟಿನಿ 3 ಗಂಟೆಗೆ

ರಣಜಿತ್ ಯಶಸ್ವಿ 3 ನೇ ವಾರ

ನರ್ಗಿಸ್, ದಿಲೀಪ್‌ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ❁ ಬಾಬುಲ್

ಅಮೋಘ ಹಿಂದಿ ಚಿತ್ರ — — ಪ್ರತಿದಿನ 3 ಪ್ರದರ್ಶನಗಳು

Edited, Printed and Published by M. S. Krishna Rao, at the Satyavadi Press Chamrajpuram Mysore

ಲಂಡನ್ ವಿಕ್ಟೋರಿಯಾ ರೈಲ್ವೇ ಸ್ಟೇಷನ್ನಿನ ನೂತನ ಟಿಕೇಟ್ ಆಫೀಸು